ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟದೆ)
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ.) ರವರ ಕಛೇರಿ
ಚಾ.ವಿ.ಸ.ನಿ.ನಿ., ಹೂಟಗಳ್ಳಿ ಉಪ-ವಿಭಾಗ, ಹೂಟಗಳ್ಳಿ,
ಮೈಸೂರು.
ದೂರವಾಣಿ : 2404922
E-mail : aeehtgmys@gmail.com

ದಿನಾಂಕ : 21.08.2019

23

ಕ್ರ.ಸಂ: ಸ.ಕಾ.ನಿ.ಇಂ(ವಿ)/ಸ.ಇಂ(ತಾ)/ಹೂ. 1468-1470

## ಸಭಾ ನಡಾವಳಿ

ಹೂಟಗಳ್ಳಿ ಉಪವಿಭಾಗದಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್ ರವರ ಅಧ್ಯಕ್ಷತೆಯಲ್ಲಿ ದಿನಾಂಕ : 17.08.2019 ರಂದು ಬೆಳಗ್ಗೆ 11:00 ಗಂಟೆಗೆ ಜನ ಸಂಪರ್ಕ ಸಭೆಯನ್ನು ವಿದ್ಯುತ್ ಸಂಬಂಧಿತ ದೂರುಗಳು/ಕುಂದುಕೊರತೆಗಳ ಕುರಿತು ನಡೆದ ಸಭಾ ನಡಾವಳಿ.

**ಸಭೆಗೆ ಹಾಜರಿದ್ದ ಅಧಿಕಾರಿ/ನೌಕರರು :-**

1. ಶ್ರೀಯುತ ಚಿಕ್ಕಸಿದ್ದೇಗೌಡರು ರವರು, ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ, ವಿ.ವಿ.ಮೊಹಲ್ಲಾ ವಿಭಾಗ, ಚಾ.ವಿ.ಸ.ನಿ.ನಿ, ಮೈಸೂರು.
2. ಶ್ರೀ. ಉಮೇಶ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾ.ವಿ.ಸ.ನಿ.ನಿ., ಹೂಟಗಳ್ಳಿ ಉಪವಿಭಾಗ, ಮೈಸೂರು.
3. ಶ್ರೀಮತಿ ಮಂಜುಳಾ, ಸಹಾಯಕ ಇಂಜಿನಿಯರ್(ತಾ), ಚಾ.ವಿ.ಸ.ನಿ.ನಿ, ಹೂಟಗಳ್ಳಿ ಉಪವಿಭಾಗ, ಮೈಸೂರು
4. ಶ್ರೀ ಮಂಜುನಾಥ, ಸಹಾಯಕ ಇಂಜಿನಿಯರ್(ವಿ), ಹೂಟಗಳ್ಳಿ ಶಾಖೆ,
5. ಶ್ರೀ ಸಂದೀಪ್, ಸಹಾಯಕ ಇಂಜಿನಿಯರ್(ವಿ), ಬೋಗಾದಿ ಶಾಖೆ.
6. ಶ್ರೀ ರಾಘವೇಂದ್ರ, ಕಿರಿಯ ಇಂಜಿನಿಯರ್(ವಿ), ಇಲವಾಲ ಶಾಖೆ.
7. ಶ್ರೀ ನಾಗೇಂದ್ರ, ಕಿರಿಯ ಇಂಜಿನಿಯರ್(ವಿ), ಬೀರಿಹುಂಡಿ ಶಾಖೆ.
8. ಶ್ರೀ. ಸ್ವಾಮಿ, ಕಿರಿಯ ಇಂಜಿನಿಯರ್(ವಿ), ಬೋಗಾದಿ ಶಾಖೆ.
9. ಶ್ರೀ ಶಿವಪ್ರಸಾದ್, ಕಿರಿಯ ಇಂಜಿನಿಯರ್(ವಿ), ರೂಪನಗರ ಶಾಖೆ
10. ಶ್ರೀ ಪುಟ್ಟರಾಜ, ಸಹಾಯಕ ಲೆಕ್ಕಾಧಿಕಾರಿ, ಹೂಟಗಳ್ಳಿ ಉಪವಿಭಾಗ

**ಸಭೆಗೆ ಹಾಜರಿದ್ದ ಜನರು :**

1. ಶ್ರೀಮತಿ ಸುಧಾ, ಕೆ.ಹೆಚ್.ಬಿ. ಕಾಲೋನಿ, ಹೂಟಗಳ್ಳಿ, ಮೈಸೂರು
2. ಶ್ರೀ ಕೃಷ್ಣ, # 205, ಚಾಮುಂಡೇಶ್ವರಿ ನಗರ, ಬೆಳವಾಡಿ, ಮೈಸೂರು.

*********

ಸಭೆಯಲ್ಲಿ ಉಪಸ್ಥಿತರಿದ್ದಂತಹ ಎಲ್ಲಾ ಅಧಿಕಾರಿಗಳನ್ನು ಹಾಗೂ ಜನರನ್ನು ಸ್ವಾಗತಿಸಿ ಸಭೆ ಪ್ರಾರಂಭಿಸಲಾಯಿತು. ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ವಿದ್ಯುತ್ ಜನ ಸಂಪರ್ಕ ಸಭೆಯ ಮಹತ್ವದ ಬಗ್ಗೆ ತಿಳಿಸುತ್ತಾ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿರ್ದೇಶನದನ್ವಯ ಪ್ರತಿ 3 ತಿಂಗಳಿಗೊಮ್ಮೆ ಉಪವಿಭಾಗ ಮಟ್ಟದಲ್ಲಿ ಜನಸಂಪರ್ಕ ಸಭೆಯನ್ನು ನಡೆಸಲಾಗುವುದು ಎಂದು ಸಭೆಗೆ ಮಾಹಿತಿ ನೀಡಿದರು.

ದಿನಾಂಕ : 08.05.2019 ರಂದು ನಡೆದ ಸಭೆಯಲ್ಲಿ ಸ್ವೀಕರಿಸಿದ ದೂರುಗಳು : 4

ದಿನಾಂಕ : 14.08.2019 ರಂದು ಸ್ವೀಕೃತವಾದ ದೂರಿನ ಸಂಖ್ಯೆ : 2

...2...

Scanned by CamScanner

ದಿನಾಂಕ : 08.05.2019 ರಂದು ಹೂಟಗಳ್ಳಿ ಉಪವಿಭಾಗದಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ ನಡೆದ ಜನ ಸಂಪರ್ಕ ಸಭೆಯ ಗ್ರಾಹಕರ ವಿದ್ಯುತ್ ಸಂಬಂಧಿತ ದೂರುಗಳು/ಕುಂದುಕೊರತೆಗಳ ಬಗ್ಗೆ ಕುಲಂಕುಷವಾಗಿ ಪರಿಶೀಲಿಸಿ ತೆಗೆದುಕೊಂಡ ಕ್ರಮದ ಬಗ್ಗೆ ಕೆಳಕಂಡಂತೆ ವಿವರಿಸಿದರು.

| ಕ್ರ.ಸಂ. | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ತೆಗೆದುಕೊಂಡ ಕ್ರಮ |
|---|---|---|---|
| 1. | **ಶ್ರೀ ಧರ್ಮವೀರ್** | ▪ ಉಪವಿಭಾಗದ ತಾತ್ಕಾಲಿಕ ವಿದ್ಯುತ್ ಸಂಪರ್ಕಕ್ಕೆ Pre-Paid ಮಾಪಕಗಳನ್ನು ಅಳವಡಿಸಿರುವುದರಿಂದಗ್ರಾಹಕರಿಗೆ ಮಂಜೂರಾದ ಭಾರದ ಬಗ್ಗೆ ಅಸಮಧಾನ ವ್ಯಕ್ತಪಡಿಸಿರುತ್ತಾರೆ. | ▪ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಉತ್ತರಿಸುತ್ತ, ಉಪವಿಭಾಗದ ತಾತ್ಕಾಲಿಕ ವಿದ್ಯುತ್ ಸಂಪರ್ಕಕ್ಕೆ Pre-Paid ಮಾಪಕಗಳನ್ನು ಅಳವಡಿಸಿರುವುದರಿಂದ ಗ್ರಾಹಕರಿಗೆ ಮಂಜೂರಾದ ಭಾರದ ಕುರಿತು ಎಲ್.ಟಿ.ರೇಟಿಂಗ್‌ರವರಿಂದ ರೇಟ್ ಮಾಡಿಸಿರುತ್ತಾರೆ. |
| 2. | **ಶ್ರೀ ರಮೇಶ್** | ▪ ಹೂಟಗಳ್ಳಿ ಗ್ರಾಮ ವ್ಯಾಪ್ತಿಯಲ್ಲಿರುವ ಕಾವೇರಿ ಬಡಾವಣೆಯು ಹಾಲಿ ವ್ಯವಸ್ಥೆಯಲ್ಲಿ ಇಲವಾಲ ಶಾಖೆಗೆ ಒಳಪಟ್ಟಿದ್ದು, ಈ ಬಡಾವಣೆಯ ಗ್ರಾಹಕರು ತಮ್ಮ ಕುಂದುಕೊರತೆಗಳಿಗೆ ಹಾಗೂ ಮಾಸಿಕ ಬಿಲ್ಲನ್ನು ಭರಿಸಲು ಇಲವಾಲ ಶಾಖೆಗೆ ಹೋಗಬೇಕಿರುತ್ತದೆ. ಸದರಿ ಬಡಾವಣೆಯು ಹೂಟಗಳ್ಳಿ ಶಾಖೆಗೆ ಸಮೀಪವಿದ್ದು, ಕಾವೇರಿ ಬಡಾವಣೆಯನ್ನು ಹೂಟಗಳ್ಳಿ ಶಾಖೆಗೆ ಸೇರ್ಪಡೆ ಮಾಡಲು ಕ್ರಮವಹಿಸಬೇಕಾಗಿ ಮನವಿ ಮಾಡಿರುತ್ತಾರೆ. | ▪ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಉತ್ತರಿಸುತ್ತ, ಹೂಟಗಳ್ಳಿ ಗ್ರಾಮ ವ್ಯಾಪ್ತಿಯಲ್ಲಿರುವ ಕಾವೇರಿ ಬಡಾವಣೆಯು ನಾನ್ ಆರ್.ಎ.ಪಿ.ಡಿ.ಆರ್.ಪಿ ವ್ಯಾಪ್ತಿಯಲ್ಲಿದ್ದು, ತಾಂತ್ರಿಕ ಕಾರಣಗಳಿಂದ ಈ ಬಡಾವಣೆಯನ್ನು ಆರ್.ಎ.ಪಿ.ಡಿ.ಆರ್.ಪಿ ವ್ಯಾಪ್ತಿಯಲ್ಲಿರುವ ಹೂಟಗಳ್ಳಿ ಶಾಖೆಗೆ ಸೇರ್ಪಡೆ ಮಾಡಲು ವಿಳಂಬವಾಗಿರುವುದಾಗಿ ಹಾಗೂ ಮುಂಬರುವ ದಿನಗಳಲ್ಲಿ ಮೇಲಾಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದೆಂದು ಮಾಹಿತಿ ನೀಡಿದರು. |

Scanned by CamScanner

| | | | |
|---|---|---|---|
| 3. | **ಶ್ರೀ ಮೋಹನ್ ಕುಮಾರ್** | ▪ ಬಿ.ಜಿ.ಎಸ್ ಲೇಔಟ್, ಹೂಟಗಳ್ಳಿಯಲ್ಲಿ ಪದೇಪದೆ ವಿದ್ಯುತ್ ಅಡಚಣೆಯಾಗುತ್ತಿರುವುದಾಗಿ ತಿಳಿಸಿರುತ್ತಾರೆ. | ಬಿ.ಜಿ.ಎಸ್ ಲೇಔಟ್, ಹೂಟಗಳ್ಳಿಯಲ್ಲಿ ವಿದ್ಯುತ್ ಅಡಚಣೆಯಾಗಿರುವ ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗಿರುತ್ತದೆ. |
| 4. | **ಶ್ರೀ ಎ.ಜಿ. ಮಂಜುಳ** | ▪ ಚಾ.ವಿ.ಸ.ನಿ.ನಿ ವಿದ್ಯುತ್ ಬಿಲ್ಲಿನ ಕೊನೆಯಲ್ಲಿ ಐಡಿಯಾ ಇನ್ಫಿನಿಟಿ ಎಂದು ಮುಂದ್ರಣವಾಗಿದ್ದು, ಇದಕ್ಕೆ ಕಾರಣವೇನೆಂದು ಕೇಳಿರುತ್ತಾರೆ. | ▪ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಉತ್ತರಿಸುತ್ತ, ಚಾ.ವಿ.ಸ.ನಿ.ನಿ ವಿದ್ಯುತ್ ಬಿಲ್ಲಿನಲ್ಲಿ ಐಡಿಯಾ ಇನ್ಫಿನಿಟಿ ಎಂದು ಮುಂದ್ರಣವಾಗುತ್ತಿರುವ ಬಗ್ಗೆ ಮೇಲಾಧಿಕಾರಿಯವರಿಗೆ ತಿಳಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿರುತ್ತಾರೆ. |

ನಂತರ, ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ದಿನಾಂಕ : 14.08.2019 ರ ಸಭೆಯಲ್ಲಿ ಉಪವಿಭಾಗ ವ್ಯಾಪ್ತಿಯ ಜನರು ಭಾಗವಹಿಸಿ ವಿದ್ಯುತ್ ಸರಬರಾಜಿನ ಕುಂದುಕೊರತೆಗಳ ಬಗ್ಗೆ ಚರ್ಚಿಸಿ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಸೇವೆಯನ್ನು ಉನ್ನತೀಕರಿಸಲು ಸಲಹೆ ಸೂಚನೆಗಳನ್ನು ನೀಡಬಹುದಾಗಿರುತ್ತದೆ ಎಂದು ಸಭೆಗೆ ತಿಳಿಸಿ, ಸಭೆಯನ್ನು ಆರಂಭಿಸಿದರು.

**ಸಭೆಯಲ್ಲಿ ತಿಳಿಸಿದಂತಹ ಅಹವಾಲುಗಳು ಈ ಕೆಳಕಂಡಂತಿರುತ್ತವೆ :**

| ಕ್ರ.ಸಂ. | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| 1. | **ಶ್ರೀಮತಿ ಸುಧಾ** | ▪ ಇವರು ತಮ್ಮ ಮನೆಯ ಮುಂಭಾಗದಲ್ಲಿ ವಿದ್ಯುತ್ ಕಂಬವು ಶಿಥಿಲಗೊಂಡಿದ್ದು, ಇದನ್ನು ಬದಲಾಯಿಸಿ ಕೊಡಲು ಕೋರಿರುತ್ತಾರೆ. | ▪ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳು ಸೂಚಿಸಿರುತ್ತಾರೆ. |
| 2. | **ಶ್ರೀ ಕೃಷ್ಣ** | ▪ ಇವರು ಕೈಮಗ್ಗ ಕಾರ್ಖಾನೆ ನಡೆಸುತ್ತಿದ್ದು, ಸದರಿ ಕಾರ್ಖಾನೆಯ ಸ್ಥಾವರ ಸಂಖ್ಯೆ RYP42 ರ ವಿದ್ಯುತ್ ಬಿಲ್ಲಿನ ಮೊತ್ತವು ಹೆಚ್ಚಾಗಿ ಬರುತ್ತಿರುತ್ತದೆ. ಈ ವಿದ್ಯುತ್ ಬಿಲ್ಲಿನಲ್ಲಿ ಸರ್ಕಾರದಿಂದ ವಿನಾಯಿತಿ ನೀಡಬೇಕಾಗಿ ಕೋರಿರುತ್ತಾರೆ. | ▪ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಗ್ರಾಹಕರಿಗೆ, ತಮ್ಮ ಬಳಿ ಸಂಬಂಧಪಟ್ಟ ಸರ್ಕಾರದಿಂದ ಮಾನ್ಯತೆ ಪಡೆದ ಪತ್ರಗಳನ್ನು ನೀಡಲು ಸೂಚಿಸಿರುತ್ತಾರೆ. ನಂತರ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದರು. |

...4....

Scanned by CamScanner

ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಮಾತನಾಡಿ, ಜನರಿಗೆ ಈ ಸಭೆಯಲ್ಲಿ ದಾಖಲಿಸಿದ ದೂರುಗಳನ್ನು ಆಧ್ಯತೆ ಮೇರೆಗೆ ಬಗೆಹರಿಸುವುದಾಗಿ ತಿಳಿಸಿ, ಭಾಗವಹಿಸಿದ ಎಲ್ಲಾ ಜನರಿಗೂ ವಂದನೆಗಳನ್ನು ಸಲ್ಲಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಸೆಸ್ಕ್, ಹೂಟಗಳ್ಳಿ ಉಪವಿಭಾಗ,
ಮೈಸೂರು.

ಪ್ರತಿಯನ್ನು :

1. ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಕಾ ಮತ್ತು ಪಾ ವಿಭಾಗ, ಜೋಡಿ ಬಸವೇಶ್ವರ ರಸ್ತೆ, ಕುವೆಂಪುನಗರ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವಿಭಾಗ, ವಿ.ವಿ.ಮೊಹಲ್ಲಾ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
3. ಕಛೇರಿ ಪ್ರತಿ.

Scanned by CamScanner